# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ಸಂಖ್ಯೆ:ತುವಿ:ಸಾ&ಖ.ಕೋ:2024-25/ 1983 ದಿನಾಂಕ:28.08.2024

**:ದರಪಟ್ಟಿ ಆಹ್ವಾನ:**

ವಿಷಯ: ವಿಶ್ವವಿದ್ಯಾನಿಲಯದ ಕುಮಾರವ್ಯಾಸ ಅಧ್ಯಯನ ಪೀಠದ ವತಿಯಿಂದ **"ರೂಪಕ ಕವಿಯ ಕಾವ್ಯ ಸಾಮ್ರಾಜ್ಯ"** ಎಂಬ ಕಾವ್ಯವನ್ನು ಮುದ್ರಿಸಿ ಸರಬರಾಜು ಪಡೆಯಲು ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಸಂಯೋಜಕರು, ಕುಮಾರವ್ಯಾಸ ಅಧ್ಯಯನ ಪೀಠ, ಇವರ ಪತ್ರ ದಿನಾಂಕ: 25.07.2024.
2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/9035 ದಿನಾಂಕ: 09.09.2022.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06.08.2024 (ಕಂಡಿಕೆ-164)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಮನವಿ ಮೇರೆಗೆ "ರೂಪಕ ಕವಿಯ ಕಾವ್ಯ ಸಾಮ್ರಾಜ್ಯ" ಎಂಬ ಕಾವ್ಯವನ್ನು ಪುಸ್ತಕ ರೂಪದಲ್ಲಿ ಮುದ್ರಿಸಬೇಕಾಗಿದೆ. ಈ ಸಂಬಂಧ ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಈ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಷರತ್ತುಗಳಿಗೊಳಪಟ್ಟು ಉಲ್ಲೇಖ (03)ರ ಅನುಮೋದನೆ ಮೇರೆಗೆ ಮುದ್ರಣಕ್ಕೆ ಆಸಕ್ತ ನೊಂದಾಯಿತ ಬಿಡ್ಡುದಾರರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಪುಸ್ತಕದ ಹೆಸರು | ಮಾನದಂಡಗಳು | ಪ್ರಮಾಣ | ಮುದ್ರಣದ ದರ ರೂ. (ಒಂದು ಪ್ರತಿಗೆ, ಎಲ್ಲಾ ತೆರಿಗೆಗಳು ಸೇರಿದಂತೆ) |
|---|---|---|---|---|
| 1. | ರೂಪಕ ಕವಿಯ ಕಾವ್ಯ ಸಾಮ್ರಾಜ್ಯ | 1. ಪುಸ್ತಕದ ಶೀರ್ಷಿಕೆಯ ಹೆಸರು : ರೂಪಕ ಕವಿಯ ಕಾವ್ಯ ಸಾಮ್ರಾಜ್ಯ<br>2. ಪುಟಗಳು : 250 ಪುಟಗಳು | 100 ಪ್ರತಿಗಳು | |

**ಷರತ್ತು ಮತ್ತು ನಿಬಂಧನೆಗಳು:-**

1. ಲಕೋಟೆಯ ಮೇಲೆ **"ರೂಪಕ ಕವಿಯ ಕಾವ್ಯ ಸಾಮ್ರಾಜ್ಯ" ಸರಬರಾಜು ಮಾಡಲು ದರಪಟ್ಟಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. **ಪುಟಗಳ ಸಂಖ್ಯೆ ವ್ಯತ್ಯಾಸವಾದಲ್ಲಿ ಅದಕ್ಕನುಗುಣವಾಗಿ ವೆಚ್ಚದಲ್ಲೂ ವ್ಯತ್ಯಾಸವಾಗುವುದರಿಂದ ಮುಖ ಪುಟಕ್ಕೆ ಎಷ್ಟು ಬೆಲೆ ಮತ್ತು ಒಳಪುಟಗಳಿಗೆ ಎಷ್ಟು ಬೆಲೆ ಎಂದು ಪ್ರತ್ಯ-ಪ್ರತ್ಯೇಕವಾಗಿ ದರವನ್ನು ನಮೂದಿಸತಕ್ಕದ್ದು.**
3. ವಿಶ್ವವಿದ್ಯಾನಿಲಯಗಳ ವಿದ್ವತ್ ಪತ್ರಿಕೆ(ಜರ್ನಲ್)ಗಳನ್ನು ಪ್ರಕಟಿಸಿ ಅನುಭವ ಇರುವವರನ್ನು ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು.
4. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 04.09.2024 ಅಪರಾಹ್ನ 3.00** ಗಂಟೆ.
5. ದರಪಟ್ಟಿಗಳನ್ನು ಮಾನ್ಯ ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು-572103 ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಲ್ಲ.
6. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
7. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸತಕ್ಕದ್ದು.
8. ವಿಶ್ವವಿದ್ಯಾನಿಲಯವು ಸೂಚಿಸುವ ಸ್ಥಳಕ್ಕೆ ಮುದ್ರಣ ಮಾಡಿದ ಪುಸ್ತಕಗಳನ್ನು ಸರಬರಾಜು ಮಾಡುವುದು ಮತ್ತು ಸಾರಿಗೆ ವೆಚ್ಚವನ್ನು (ತಗಲುವ ಕಾರ್ಮಿಕರ ವೆಚ್ಚ) ಸರಬರಾಜುದಾರರೇ ಭರಿಸತಕ್ಕದ್ದು.
9. ಪುಸ್ತಕದ ಅಂದಾಜು ಪುಟಗಳು : 250

(ಪು.ತಿ.ನೋ)

10. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ, ಸಾಗಾಣಿಕಾ ವೆಚ್ಚ ಮತ್ತು ಇತರೆ ಸೇವೆಯ ಮೊತ್ತವನ್ನು ಒಳಗೊಂಡಿರತಕ್ಕದ್ದು.
11. ದರಪಟ್ಟಿಯಲ್ಲಿ ನಮೂದಿಸಿರುವ ಮುದ್ರಣದ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
12. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
13. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
14. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಉಪಕುಲಸಚಿವರು
**ಉಪಕುಲಸಚಿವರು**
**ಖರೀದಿ ಕೋಶ**
**ತುಮಕೂರು ವಿಶ್ವವಿದ್ಯಾನಿಲಯ**
**ತುಮಕೂರು**

ಪ್ರತಿಗಳು:-

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಂಯೋಜಕರು, ಕುಮಾರವ್ಯಾಸ ಅಧ್ಯಯನ ಪೀಠ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಂ ಅನಾಲಿಸ್ಟ್, ಗಣಕಯಂತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು.)
4. ಕಛೇರಿ ಪ್ರತಿ.